**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ.ಮಲ್ಲೇಶ್ವರಂ, ಬೆಂಗಳೂರು.560003.**

**2024–25ರ ಎಸ್.ಎಸ್.ಎಲ್.ಸಿ.ಮಾದರಿ ಪ್ರಶ್ನೆಪತ್ರಿಕೆ–4 ಮಾದರಿ ಉತ್ತರ ವಿಷಯ: ಸಮಾಜ ವಿಜ್ಞಾನ.**

**ವಿಷಯ ಸಂಕೇತ:85–ಕೆ ಸಮಯ:3ಗಂಟೆ 15 ನಿಮಿಷ. ಗರಿಷ್ಠ ಅಂಕಗಳು:80.**

**I.ಈ ಪ್ರತಿಯೊಂದು ಪ್ರಶ್ನೆಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನುಬರೆಯಿರಿ. 8X1=8**

1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಪರಿಣಾಮ

ಎ) ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡಿತು. ಬಿ) ಕಲ್ಕತ್ತದಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಯಾಯಿತು. ಸಿ) ಝಾನ್ಸಿ ಒಂದು ಸ್ವತಂತ್ರ ರಾಜ್ಯವಾಯಿತು ಡಿ) ನಾನಾ ಸಾಹೇಬರಿಗೆ ನಿವೃತ್ತಿ ವೇತನ ನೀಡಲಾಯಿತು.

ಉತ್ತರ: ಎ) ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡಿತು.

2. ಹಿರೋಷೀಮಾ ಮತ್ತು ನಾಗಸಾಕಿ ನಗರಗಳಿರುವುದು

ಎ) ಅಮೆರಿಕಾ ಸಂಯುಕ್ತ ಸಂಸ್ಥಾನ ಬಿ) ಜರ್ಮನಿಯಲ್ಲಿ ಸಿ) ಜಪಾನಿನಲ್ಲಿ ಡಿ) ಪೋಲ್ಯಾಂಡಿನಲ್ಲಿ

ಉತ್ತರ: ಸಿ) ಜಪಾನಿನಲ್ಲಿ

3. ವಿಶ್ವ ಸಂಸ್ಥೆಯ ಪ್ರಧಾನ ಕಛೇರಿ ಇರುವುದು

ಎ) ರೋಮ್‌ನಲ್ಲಿ ಬಿ) ಪ್ಯಾರೀಸ್‌ನಲ್ಲಿ ಸಿ) ಜಿನೇವಾದಲ್ಲಿ ಡಿ) ನ್ಯೂಯಾರ್ಕ್‌ನಲ್ಲಿ

ಉತ್ತರ: ಡಿ) ನ್ಯೂಯಾರ್ಕ್‌ನಲ್ಲಿ

4. 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದವರು

ಎ) ಮಹಾತ್ಮ ಗಾಂಧಿ ಬಿ) ಪಂಪ ಸಿ) ಜ್ಯೋತಿ ಬಾ ಪೂಲೆ ಡಿ) ಬಸವಣ್ಣ

ಉತ್ತರ: ಬಿ) ಪಂಪ

5. ಭಾರತದ ಸಿಲಿಕಾನ್ ಕಣಿವೆ ಇರುವುದು

ಎ) ಕರ್ನಾಟಕದಲ್ಲಿ ಬಿ) ಮಹಾರಾಷ್ಟ್ರದಲ್ಲಿ ಸಿ) ಗುಜರಾತಿನಲ್ಲಿ ಡಿ) ಕೇರಳದಲ್ಲಿ

ಉತ್ತರ: ಎ) ಕರ್ನಾಟಕದಲ್ಲಿ

6. 'ಭಾರತದ ಮ್ಯಾಂಚೆಸ್ಟಾರ್'ಎಂದು ಕರೆಯಲ್ಪಡುವ ನಗರ

ಎ) ದಾವಣಗೆರೆ ಬಿ) ಕೊಯಮತ್ತೂರು ಸಿ) ಮುಂಬೈ ಡಿ) ಇಂದೋರ್

ಉತ್ತರ: ಸಿ) ಮುಂಬೈ

7. ಭಾರತದಲ್ಲಿ ಹಣಕಾಸು ವರ್ಷ ಪ್ರಾರಂಭವಾಗುವುದು

ಎ) ಏಪ್ರೀಲ್ 1 ರಿಂದ ಬಿ) ಜೂನ್ 5 ರಿಂದ ಸಿ) ನವೆಂಬರ್ 1 ರಿಂದ ಡಿ) ಮಾರ್ಚ್ 1 ರಿಂದ

ಉತ್ತರ: ಎ) ಏಪ್ರೀಲ್ 1 ರಿಂದ

8. ಭಾರತದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಪ್ರಾರಂಭಿಸಲಾದ ವರ್ಷ

ಎ) 1947 ಬಿ) 1954 ಸಿ) 1966 ಡಿ) 1978

ಉತ್ತರ: ಡಿ) 1978

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8X1=8**

9. ಭಾರತದ ಪ್ರಥಮ ರಾಷ್ಟ್ರಪತಿ ಯಾರು?

ಉತ್ತರ: ಭಾರತದ ಪ್ರಥಮ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್.

10. ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿಯನ್ನು ಹೆಸರಿಸಿ.

ಉತ್ತರ: ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿ– ಮುಸಲೋನಿ

11. ದತ್ತಿ ಸಮಿತಿಯನ್ನು ಏಕೆ ಸ್ಥಾಪಿಸಲಾಯಿತು?

ಉತ್ತರ: ವಸಾಹತು ಶಾಹಿತ್ವಕ್ಕೆ ಒಳಪಟ್ಟಿದ್ದ ಪ್ರದೇಶಗಳು ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸಲು ಮತ್ತು ಅವುಗಳ ಮೇಲುಸ್ತವಾರಿ ಮಾಡಲು ಸ್ಥಾಪಿಸಿದ ಸಂಸ್ಥೆಯೇ ದತ್ತಿ ಸಮಿತಿ.

12. ನಮ್ಮ ಸಂವಿಧಾನದ ಯಾವ ವಿಧಿಯು ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸುತ್ತದೆ?

ಉತ್ತರ: ನಮ್ಮ ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸುತ್ತದೆ.

13. ಭಾರತದ ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆಯಾಗಲು ಕಾರಣವೇನು?

ಉತ್ತರ:*ಅಧಿಕ ಮಳೆ ಸುರಿದ ಪರಿಣಾಮ ಮತ್ತು **ಸೂರ್ಯನ ಲಂಬ ಕಿರಣಗಳು** ದಕ್ಷಿಣಾರ್ಧಗೋಳದ ಮೇಲೆ ಬೀಳುತ್ತವೆ.

14. ಭಾರತದ ಪ್ರಥಮ ಕಾಗದ ಕೈಗಾರಿಕೆಯನ್ನು ಎಲ್ಲಿ ಸ್ಥಾಪಿಸಲಾಯಿತು?

ಉತ್ತರ: ಭಾರತದ ಪ್ರಥಮ ಕಾಗದ ಕೈಗಾರಿಕೆಯನ್ನು ಪಶ್ಚಿಮ ಬಂಗಾಳದ ಸೇರಾಂಪುರದಲ್ಲಿ ಸ್ಥಾಪಿಸಲಾಯಿತು.

15. ಅಧಿಕಾರ ವಿಕೇಂದ್ರೀಕರಣ ಎಂದರೇನು?

ಉತ್ತರ: ಹಳ್ಳಿ/ಗ್ರಾಮದ ಜನರಿಗೆ ಹಳ್ಳಿಯ ಆಡಳಿತ ,ಅಧಿಕಾರ ಮತ್ತು ಜವಾಬ್ದಾರಿಯನ್ನು ವಹಿಸಿಕೊಡುವುದು.

16. ಪೂರೈಕೆದಾರ ಎಂದು ಯಾರನ್ನು ಕರೆಯಲಾಗುತ್ತದೆ?

ಉತ್ತರ: ಬಳಕೆದಾರರಿಂದ ಹಣ ಪಡೆದು ವಸ್ತು ಅಥವಾ ಸೇವೆಗಳನ್ನು ನೀಡುವವನೇ ಪೂರೈಕೆದಾರ.

**III.ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 8X2=16**

17.ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

ಉತ್ತರ: :* ಕೇಂದ್ರ ಸರ್ಕಾರದ ಎ ಮತ್ತು ಬಿ ಹುದ್ದೆಗಳಿಗೆ ನೇಮಕಾ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತದೆ.* ನೇರ ನೇನಕಾತಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸುತ್ತದೆ.* ವಿವಿಧ ಹುದ್ದೆಗಳ ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಬೇಕಾದ ಸೇವೆಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುತ್ತದೆ.* ಅಧಿಕಾರಿಗಳ ದುರ್ವರ್ತನೆಯ ಮೇರೆಗೆ ಶಿಸ್ತು ಕ್ರಮ.* ರಾಷ್ಟ್ರಾಧ್ಯಕ್ಷರ ಸೂಚನೆಯ ಮೇರೆಗೆ ಯಾವುದೇ ವಿಷಯಗಳಿಗೆ ಸರ್ಕಾರಕ್ಕೆ ಸಲಹೆ ನೀಡುವುದು.

**ಅಥವಾ** ಕೃಷಿ ಮತ್ತು ಆಹಾರ ಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

ಉತ್ತರ: *ಕೃಷಿಕ್ಷೇತ್ರದ ಅಭಿವೃದ್ಧಿ *ಪೌಷ್ಠಿಕ ಆಹಾರ ಒದಗಿಸುವಿಕೆ.*ಜಾಗತಿಕ ಸಮುದಾಯವನ್ನು ಹಸಿವಿನಿಂದ ಮುಕ್ತ.

18. ದೊಂಬಿಯ ಸ್ವರೂಪವನ್ನು ತಿಳಿಸಿ

ಉತ್ತರ: * ದೊಂಬಿಯಲ್ಲಿ ಕನಿಷ್ಠ ಮಟ್ಟದ ಉದ್ದೇಶವಿರುವುದಿಲ್ಲ.* ಎದುರಿಗೆ ಸಿಕ್ಕಿದ್ದೆಲ್ಲವನ್ನು ಹಾಳುಮಾಡುತ್ತಾರೆ
* ಇದು ಗೊಂದಲವನ್ನು ಸೃಷ್ಟಿ ಮಾಡುತ್ತದೆ. * ಕೆಲವೊಮ್ಮೆ ಅಪಾರವಾದ ಹಾನಿಯನ್ನುಂಟುಮಾಡುತ್ತದೆ. * ಇದಕ್ಕೆ ನಿಶ್ಚಿತ ಗುರಿ ಇರುವುದಿಲ್ಲ. * ಇದು ಕಾನೂನು ಮತು ಸುವ್ಯವಸ್ಥೆಗೆ ಗಂಭೀರ ಸವಾಲುಗಳಾಗಿವೆ.

**ಅಥವಾ** ವರದಕ್ಷಿಣೆಯ ದುಷ್ಪರಿಣಾಮಗಳನ್ನು ತಿಳಿಸಿ

ಉತ್ತರ:* ಸ್ತ್ರೀಯರ ಸ್ವಾಭಿಮಾನ,ಗೌರವ,ಸ್ಥಾನಮಾನ ಕುಗ್ಗಿಸುತ್ತದೆ.*ಕೌಟುಂಬಿಕ ಕಲಹಗಳನ್ನು ಉಂಟುಮಾಡುತ್ತದೆ. * ಸ್ತ್ರೀ–ಪುರುಷರ ನಡುವೆ ಒಡಕನ್ನು ಉಂಟುಮಾಡುತ್ತದೆ. *ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುತ್ತದೆ.* ಕೌಟುಂಬಿಕ ಸಂಬಂಧಗಳು ಹಾಳಾಗುತ್ತವೆ *ಮೋಸದ ವಿವಾಹಗಳು ನಡೆಯುವ ಸಂಭವ ಹೆಚ್ಚು. * ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ
* ವಿವಾಹ ವಿಚ್ಛೇದನ

19. ಆನಿಬೆಸೆಂಟರು ಥಿಯೋಸಾಫಿಕಲ್ ಸೊಸೈಟಿಯ ಚಟುವಟಿಕೆಗಳಿಗೆ ನವ ಚೈತನ್ಯ ನೀಡಿದರು.ಹೇಗೆ?

ಉತ್ತರ: * ಬ್ರಹ್ಮ ವಿದ್ಯಾ ಸಮಾಜಕ್ಕೆ ನವ ಚೈತನ್ಯ ನೀಡಿದರು. *ಭಾರತೀಯ ಸಂಸ್ಕೃತಿಯ ಅಭಿಮಾನ ಭಿತ್ತಿದರು
* ವಿಶ್ವ ಬ್ರಾತೃತ್ವವನ್ನು ಪ್ರತಿಪಾದಿಸಿದರು.* ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಿದರು. * 1916ರಲ್ಲಿ ಹೋಂ ರೂಲ್ ಚಳುವಳಿಯನ್ನು ಆರಂಭಿಸಿದರು. * 1917ರಲ್ಲಿ ಕಾಂಗ್ರೇಸಿನ ಮೊದಲ ಮಹಿಳಾ ಆಧ್ಯಕ್ಷತೆ ವಹಿಸಿದ್ದರು.
* ನ್ಯೂ ಇಂಡಿಯಾ ಎಂಬ ಪತ್ರಿಕೆ ಹೊರಡಿಸಿದರು. * ಹಿಂದೂ ಧರ್ಮದ ತಾತ್ವಿಕ ಚಿಂತನೆ ಪ್ರತಿಪಾದಿಸಿದರು.

20. ಜುನಾಗಢವನ್ನು ಭಾರತ ಒಕ್ಕೂಟಕ್ಕೆ ಹೇಗೆ ವಿಲೀನಗೊಳಿಸಲಾಯಿತು?

ಉತ್ತರ:*ಜುನಾಗಡದ ನವಾಬ ಪಾಕಿಸ್ತಾನಕ್ಕೆ ಸೇರಲು ಮುಂದಾದನು.*ಪ್ರಜೆಗಳು ಇದನ್ನು ವಿರೋಧಿಸಿ ಬೀದಿಗಿಳಿದರು.
*ನವಾಬ ರಾಜ್ಯ ಬಿಟ್ಟು ಪಾಕಿಸ್ತಾನಕ್ಕೆ ಓಡಿ ಹೋದನು.* 1949ರಲ್ಲಿ ಜುನಾಗಡ್ ಭಾರತದ ಒಕ್ಕೂಟ ಸೇರಿತು.

21. ಭಾರತದ ದ್ವೀಪಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

ಉತ್ತರ: * ಭಾರತದಲ್ಲಿ ಒಟ್ಟು 247 ದ್ವೀಪಗಳಿವೆ.* ಅವುಗಳಲ್ಲಿ 204 ದ್ವೀಪಗಳು ಬಂಗಾಳ ಕೊಲ್ಲಿಯಲ್ಲಿವೆ. * ಉಳಿದ 43 ದ್ವೀಪಗಳು ಅರಬ್ಬೀ ಸಮುದ್ರದಲ್ಲಿವೆ. *ಮನ್ನಾರ್ ಖಾರಿಯಲ್ಲಿ ಕೆಲವು ಹವಳದ ದ್ವೀಪಗಳಿವೆ. * ಅಂಡಮಾನ್ ನಿಕೋಬರ್ ದ್ವೀಪಗಳು ಅಗ್ನಿಶಿಲೆಗಳಿಂದ ರಚನೆಯಾಗಿವೆ.*ಭಾರತದ ದಕ್ಷಿಣ ತುದಿ ಇಂದಿರಾಪಾಯಿಂಟ್ ನಿಕೋಬಾರ್ ದ್ವೀಪ 6 ಡಿಗ್ರಿ 45 ನಿಮಿಷದಲ್ಲಿ ಕಂಡು ಬರುತ್ತದೆ.

22. ಗೋಧಿ ಬೇಸಾಯಕ್ಕೆ ಬೇಕಾದ ಅಗತ್ಯವಾದ ಭೌಗೋಳಿಕ ಅಂಶಗಳನ್ನು ವಿವರಿಸಿ.

ಉತ್ತರ: *ಇದು **ಸಮಶೀತೋಷ್ಣ ವಲಯ**ದ ಬೆಳೆ. *ಇದು **ರಬಿ** ಕಾಲದ ಬೆಳೆ *ಇದಕ್ಕೆ **10-15 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ** ಅವಶ್ಯಕ*ಇದಕ್ಕೆ **50-70 ಸೆಂ.ಮಿ. ಮಳೆ** ಅವಶ್ಯಕ. *ಇದು **ಮರಳು ಮಿಶ್ರಿತ ಜೇಡಿಮತ್ತು ಕಪ್ಪು ಮಣ್ಣು ಅವಶ್ಯಕ.**

23. ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಂತರ ಹೆಚ್ಚಾಗುತ್ತಿದೆ. ಏಕೆ?

*ಗ್ರಾಮೀಣ ಜನರು ಬಹುತೇಕ ಕೃಷಿಯನ್ನೇ ಅವಲಂಬಿಸಿದ್ದಾರೆ.* ಕಡು ಬಡತನ * ಗುಡಿ ಕೈಗಾರಿಕೆಗಳ ನಾಶ * ಪ್ರಾಥಮಿಕ ವಲಯದಿಂದ ರಾಷ್ಟ್ರೀಯ ಆದಾಯದ ಕೊಡುಗೆ ಕಡಿಮೆಯಾಗಿತ್ತಿದೆ.

24. ಬಳಕೆದಾರರ ಶೋಷಣೆಗೆ ಕಾರಣಗಳೇನು?

ಉತ್ತರ: * ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಳ * ಮಧ್ಯವರ್ತಿಗಳಿಂದ ಬೆಲೆ ನಿರ್ಧಾರ
* ವ್ಯವಸಾಯದ ಆಧುನೀಕರಣದಿಂದ ಮಾರಾಟದ ವಿಧಾನವು ಬದಲಾಯಿತು. * ಟೆಲಿಷಾಪಿಂಗ್.

**IV.ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9X3=27**

25. ಎರಡನೆಯ ಕರ್ನಾಟಿಕ್ ಯುದ್ಧವನ್ನು ವಿವರಿಸಿ.

ಉತ್ತರ:* ಫ್ರೆಂಚರು **ಹೈದರಾಬಾದಿನ ನಿಜಾಮ ಸಲಾಬತ್‌ಜಂಗ್** ಮತ್ತು **ಕರ್ನಾಟಕದಲ್ಲಿ ಚಾಂದಾಸಾಹೇಬನನ್ನು** ನವಾಬನನ್ನಾಗಿ ಮಾಡಿದರು.* **ರಾಬರ್ಟಕ್ಲೈವ್ ಆರ್ಕಾಟನ್ನು ಮುತ್ತಿ,ಚಾಂದಾಸಾಹೇಬನನ್ನು ಸೋಲಿಸಿದನು.** * ಬ್ರಿಟಿಷರು ಚಾಂದಾಸಾಹೇಬನನ್ನು **ಕೊಂದು,ಮಹಮದ್ ಅಲಿಯನ್ನು ಕರ್ನಾಟಿಕ್ ನವಾಬ**ನನ್ನಾಗಿ ಮಾಡಿದರು * ಯುದ್ಧವು **ಪಾಂಡಿಚೇರಿ ಒಪ್ಪಂದ**ದೊಂದಿಗೆ ಮುಕ್ತಾಯವಾಯಿತು. * **ಫ್ರೆಂಚರಿಗೆ ಹಿನ್ನಡೆ** ಮತ್ತು **ಇಂಗ್ಲಿಷರಿಗೆ ಪ್ರತಿಷ್ಠೆ**ಯನ್ನು ತಂದುಕೊಟ್ಟಿತು.

**ಅಥವಾ** ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ವಿವರಿಸಿ.

ಉತ್ತರ:*ಇಂಗ್ಲೆಂಡ್‌ನಲ್ಲಾದ **ಕೈಗಾರಿಕಾ ಕ್ರಾಂತಿ**ಯ ಪರಿಣಾಮವಾಗಿ **ಭಾರತದ** ಕರಕುಶಲತೆ ಮತ್ತು ದೇಶೀಯ **ಕೈಗಾರಿಕೆಗಳು ಕ್ಷೀಣಿಸಿದವು.** *ಭಾರತದಲ್ಲಿದ್ದಂತಹ **ಕರಕುಶಲಕೆಲಸಗಾರರು** ನಿರುದ್ಯೋಗಿಗಳಾದರು.***ಉಣ್ಣೆ ಮತ್ತು ಬಟ್ಟೆ ಕೈಗಾರಿಕೆಗಳು ನಾಶವಾದವು.** ***ಗೃಹ ಕೈಗಾರಿಕೆಗಳು** ತೀವ್ರ ಆರ್ಥಿಕ **ನಷ್ಟ ಅನುಭವಿಸಿ** ಶಿಥಿಲಗೊಂಡವು. *ಭಾರತದ ಆಮದು ವಸ್ತುಗಳ ಮೇಲೆ ದುಬಾರಿ ಸುಂಕ ಹೇರಿದರು.***ಜಮೀನ್ದಾರರು ರೈತರನ್ನು ಶೋಷಿಸಿದರು.** ***ಇನಾಂ ಆಯೋಗ,ಇನಾಂ ಭೂಮಿಯನ್ನು ವಾಪಸ್** ಪಡೆಯಿತು. * ರೈತರು ಮಹಾನ್ ಪ್ರತಿಭಟನಗೆ ಮುಂದಾದರು.

26. ಕಪ್ಪುಮಣ್ಣು ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

| ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು |
|---|---|
| *ಇದು ಅಗ್ನಿಶಿಲೆಗಳ ಶಿಥಿಲೀಕರಣದಿಂದಉಂಟಾಗಿದೆ. | *ಇದು ಅಧಿಕ ಮಳೆ ಬೀಳುವ ಪ್ರದೇಶದಲ್ಲಿದೆ. |
| *ಇದು ಹತ್ತಿ ಬೆಳೆಗೆ ಸೂಕ್ತವಾದ ಮಣ್ಣು | *ಮಣ್ಣಿನಲ್ಲಿರುವ ಲವಣಾಂಶ ತೊಳೆಯಲ್ಪಟ್ಟುತ್ತದೆ. |
| *ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎನ್ನುವರು. | *ಇದು ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂ |
| *ಇದು ಹತ್ತಿ,ಈರುಳ್ಳಿ,ಎಣ್ಣೆ ಕಾಳು,ನಿಂಬೆ,ದ್ರಾಕ್ಷಿ ಬೆಳೆಗೆ | ಅಧಿಕವಾಗಿ ಹೊಂದಿದೆ.*ಫಲವತ್ತತೆ ಕಡಿಮೆ. |
| *ಇದು ಕಬ್ಬಿಣ ಮತ್ತು ಮೆಗ್ನಿಷಿಯಂ ಕಾರ್ಬೋನೆಟ್ | *ಇದು ಕಾಫಿ,ಚಹ ಮತ್ತು ತೋಟಗಾರಿಕಾ ಬೆಳೆಗೆ ಪ್ರಸಿದ್ಧವಾಗಿದೆ.*ಇದು ಪಶ್ಚಿಮ ಘಟ್ಟಗಳು,ವಿಂದ್ಯಾ ,ಸಾತ್ಪೂರ್ |
| ಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿದೆ. | |

**ಅಥವಾ** ನಿತ್ಯ ಹರಿದ್ವರ್ಣದ ಅರಣ್ಯಗಳು ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಹೇಗೆ ಭಿನ್ನವಾಗಿವೆ?
ಉತ್ತರ: **ನಿತ್ಯ ಹರಿದ್ವರ್ಣದ ಅರಣ್ಯಗಳು** * ಇವು **250 ಸೆಂ.ಮಿ. ಗಿಂತ ಅಧಿಕ ಮಳೆ** ಮತ್ತು **ಅಧಿಕ ಉಷ್ಣಾಂಶ** ಪ್ರದೇಶದಲ್ಲಿ ಕಂಡುಬರುತ್ತವೆ.* ಇವು **ಪಶ್ಚಿಮ ಘಟ್ಟಗಳು,ಈಶಾನ್ಯ ರಾಜ್ಯಗಳು,ಅಂಡಮಾನ್ ನಿಕೋಬರ್ ದ್ವೀಪಗಳು.ಲಕ್ಷದ್ವೀಪಗಳು, ಅಸ್ಸಾಂ, ಮೇಘಾಲಯ,ಮಣಿಪುರ** ಪ್ರದೇಶಗಳಲ್ಲಿ ಕಂಡುಬರುತ್ತವೆ.* ಇವುಗಳ **ಎಲೆಗಳು ವರ್ಷದ ಎಲ್ಲಾ ಕಾಲದಲ್ಲಿಯು ಹಸಿರಾಗಿರುತ್ತವೆ.**
**ಎಲೆಯುದುರುವ ಮಾನ್ಸೂನ್ ಅರಣ್ಯಗಳು**:*ಇವು ಭಾರತದಲ್ಲಿ **ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ.***ಇವು **75–250 ಸೆಂ.ಮಿ. ಮಳೆ** ಬೀಳುವ ಪ್ರದೇಶದಲ್ಲಿ ಕಂಡು ಬರುತ್ತವೆ.*ಇವು ಭಾರತದಲ್ಲಿ 65.5% ರಷ್ಟು ಅರಣ್ಯ ಹೊಂದಿವೆ.*ಇವು **ಮಾನ್ಸೂನ್ ವಾಯುಗುಣ** ಹೊಂದಿವೆ.*ಇವು ಚಳಿಗಾಲದ ಅವದಿಯಲ್ಲಿ ಮಳೆಯ ಕೊರತೆಯಿಂದ ಮತ್ತು ತೇವಾಂಶದ ಕೊರತೆಯಿಂದ ವಸಂತ ಕಾಲದಲ್ಲಿ ಮರದ ಎಲೆಗಳನ್ನು ಉದುರುತ್ತವೆ.

27. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ವಿವರಿಸಿ.
ಉತ್ತರ:* ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ *ಉದ್ಯೋಗವಕಾಶಗಳ ಹೆಚ್ಚಳವಾಗಿದೆ.*ಕೃಷಿ ಅಭಿವೃದ್ಧಿ *ಕೈಗಾರಿಕೆಗಳ ಅಭಿವೃದ್ಧಿ * ತೃತೀಯ ರಂಗದ ಬೆಳವಣಿಗೆ * ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ * ರಾಷ್ಟ್ರೀಯ ಆದಾಯ ದ ಹೆಚ್ಚಳ *ತಲಾದಾಯದಲ್ಲಿ ಹೆಚ್ಚಳ * ಜನರ ಜೀವನ ಮಟ್ಟ ಉತ್ತಮ*ಸಾಕ್ಷರತಾ ಪ್ರಮಾಣ ಹೆಚ್ಚಳ *ಸರಾಸರಿ ಜೀವಿತದ ಅವಧಿ ಹೆಚ್ಚಳ * ಜನಸಂಖ್ಯಾ ಬೆಳವಣಿಗೆ ದರದಲ್ಲಿ ಇಳಿಕೆಯಾಗಿದೆ.

**ಅಥವಾ** ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.
ಉತ್ತರ:* ಸರ್ಕಾರ ಕೋಶೀಯ ತೆರಿಗೆ ವಿಧಿಸಲು ಸಹಕಾರಿ * ಆರ್ಥಿಕ ಬೆಳವಣಿಗೆಗೆ ಸಹಕಾರಿ * ಆರ್ಥಿಕ ಸ್ಥಿರತೆಗೆ ಸಹಕಾರಿ * ವರಮಾನದ ಸಮಾನ ಹಂಚಿಕೆ * ಆಯ–ವ್ಯಯ ವಿಶ್ಲೇಷಣೆಗೆ ಸಹಕಾರಿ * ಬಡತನ,ನಿರುದ್ಯೋಗ ನಿರ್ಮೂಲನೆಗೆ ಸಹಕಾರಿ * ಬೆಲೆಗಳಲ್ಲಿ ಸ್ಥಿರತೆ *ಹಣದುಬ್ಬರದ ಬಗ್ಗೆ ತೀಲಯಲು ಸಹಾಯಕವಾಗಿದೆ.

28. ಬ್ಯಾಂಕುಗಳ ಕಾರ್ಯಗಳನ್ನು ತಿಳಿಸಿ.
ಉತ್ತರ: * ಸಾರ್ವಜನಿಕರಿಂದ ಠೇವಣಿ ಸ್ವೀಕರಿಸುತ್ತದೆ * ಸಾರ್ವಜನಿಕರಿಗೆ ಸಾಲ ಒದಗಿಸುತ್ತದೆ * ಹಣದ ವರ್ಗಾವಣೆ* ಹುಂಡಿಗಳನ್ನು ಸೋಡಿ ಮಾಡುವುದು * ಭದ್ರತಾ ಕಪಾಟು ಒದಗಿಸುವುದು * ವಿದೇಶಿ ವಿನಿಮಯ * ಸರ್ಕಾರದ ಹಣಕಾಸಿನ ವ್ಯವಹಾರ ನಡೆಸುತ್ತದೆ.

**ಅಥವಾ** ಉದ್ಯಮಿಗಳ ಕಾರ್ಯಗಳನ್ನು ತಿಳಿಸಿ.
ಉತ್ತರ:* ವ್ಯಾಪಾರದ ಚಟುವಟಿಕೆ ಆರಂಭಿಸುತ್ತಾನೆ * ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ. * ನಿರ್ಧಾರಗಳನ್ನು ಕೈಗೆತ್ತಿಕೊಳ್ಳುತ್ತಾನೆ * ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.* ಹಣಕಾಸಿನ ಆಯ–ವ್ಯಯ ನಿಭಾಯಿಸುತ್ತಾನೆ * ಕಷ್ಟನಷ್ಟ ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.

29. ಬ್ರಿಟಿಷ್ ಆಡಳಿತದಲ್ಲಿ ಪೊಲೀಸ್ ವ್ಯವಸ್ಥೆಯು ನಿರಂತರ ಬದಲಾವಣೆಗೆ ಒಳಪಟ್ಟಿತು. ಹೇಗೆ?
ಉತ್ತರ:* ಲಾರ್ಡ್ ಕಾರನ್‌ವಾಲೀಸ್ ಪ್ರಥಮತ: ವ್ಯವಸ್ಥಿತವಾದ ಪೋಲೀಸ್ ವಿಭಾಗವನ್ನು ಅಸ್ಥಿತ್ವಕ್ಕೆ ತಂದನು.
* ಲಾರ್ಡ್ ಕಾರನ್‌ವಾಲೀಸ್ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು.
* 1793ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆಗಳಾಗಿ ವಿಭಾಗಿಸಿ,ಪ್ರತಿ ಠಾಣೆಯನ್ನು ಕೊತ್ವಾಲ'ರ ಅಧೀನದಲ್ಲೂ,ಹಳ್ಳಿಗಳು'ಚೌಕಿದಾರ' ರ ಅಧೀನದಲ್ಲೂ ಇರುವಂತೆ ಮಾಡಿದನು.* 1781ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೆ ಬಂದಿತು.* 1861ರಲ್ಲಿ ಪೋಲೀಸ್ ಕಾಯ್ದೆ ಜಾರಿಗೆ ಬಂದಿತು.* 1902ರಲ್ಲಿ ಪೋಲೀಸ್ ಕಮಿಷನ್ ಕಾಯ್ದೆ ಜಾರಿಗೆ ಬಂದಿತು.

30. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ.
ಉತ್ತರ:* ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.* ಆ ಸೈನ್ಯದ ಖರ್ಚು–ವೆಚ್ಚವನ್ನು ಆ ದೇಶೀಯ ರಾಜನೇ ಭರಿಸಬೇಕು ಇಲ್ಲವೇ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.* ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.*ಬ್ರಿಟಿಷರ ಅನುಮತಿಯಿಲ್ಲದೇ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.*ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ/ಸಂಧಾನ

ಮಾಡಿಕೊಳ್ಳಬೇಕಾ ದರೆ ಗೌರ್ನರ್ ಜನರಲ್‌ನ ಅನುಮತಿ ಬೇಕು.*ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

31. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳನ್ನು ವಿವರಿಸಿ.

ಉತ್ತರ:* ವಸಹತು ಶಾಹಿತ್ವಕ್ಕೆ ವಿರೋಧ * ಸಾಮ್ರಾಜ್ಯಶಾಹಿತ್ವಕ್ಕೆ ವಿರೋಧ * ವರ್ಣಭೇಧ ನೀತಿಗೆ ವಿರೋಧ
* ಅಲಿಪ್ತ ನೀತಿ * ಆಫ್ರಿಕ ಮತ್ತು ಏಷ್ಯಾದ ಪ್ರಗತಿಗೆ ಪ್ರಥಮ ಆಧ್ಯತೆ * ನಿಶ್ಯಸ್ತ್ರೀಕರಣಕ್ಕೆ ಬೆಂಬಲ
* ವಿಶ್ವಸಂಸ್ಥೆ ಮತ್ತು ವಿಶ್ವಶಾಂತಿಗೆ ಬೆಂಬಲ.

32. ನಿರುದ್ಯೋಗವು ಒಂದು ಗಂಭಿರ ಸಾಮಾಜಿಕ ಸಮಸ್ಯೆಯಾಗಿದೆ. ಹೇಗೆ?

:* ಅತಿಯಾದ ಜನಸಂಖ್ಯೆ * ಯಾಂತ್ರೀಕರಣ * ಅತಿಯಾದ ಶ್ರಮ ವಿಭಜನೆ * ಸಾಮಾಜಿಕ ಅಸಮಾನತೆ * ಬಂಡವಾಳದ ಕೊರತೆ * ಅನಕ್ಷರತೆ * ಬಡತನ * ಅನಾರೋಗ್ಯ * ಭ್ರಷ್ಟಾಚಾರ * ಕೌಟುಂಬಿಕ ವಿಘಟನೆ * ಮೋಸ * ವಂಚನೆ * ಕಳ್ಳತನ * ವ್ಯಭಿಚಾರ ಮುಂತಾದವುಗಳನ್ನು ಉಂಟುಮಾಡುತ್ತದೆ.

33. ದೂರಸಂವೇದಿ ತಂತ್ರಜ್ಞಾನದ ಪ್ರಾಮುಖ್ಯತೆಯನ್ನು ವಿಶ್ಲೇಷಿಸಿ.

ಉತ್ತರ:**ವಸ್ತುಗಳನ್ನು ಭೌತಿಕವಾಗಿ ಸ್ಪರ್ಷಿಸದೇ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ ಸಾಧನವಾಗಿದೆ.** **ಉಪಯೋಗಗಳು**:*ನಂಬಲರ್ಹವಾದ ಮ,ತ್ತು ಸ್ಪಷ್ಟ ಮಾಹಿತಿ ಒದಗಿಸುತ್ತದೆ.*ಅತಿಶೀಘ್ರ ಮತ್ತು ಕಡಿಮೆ ವೆಚ್ಚದಮಾಹಿತಿಯನ್ನು ಸಂಗ್ರಹಿಸುವ ವಿಧಾನವಾಗಿದೆ. *ಮಾಹಿತಿಯನ್ನು ಕಂಪ್ಯೂಟರ್ ಗಳಿಂದ ವಿಶ್ಲೇಷಿಸಬಹುದು.*ಹವಾಮಾನ ವೈಪರಿತ್ಯ ಮತ್ತು ನೈಸರ್ಗಿಕ ವಿಕೋಪಗಳ ಚಿತ್ರಗಳನ್ನು ಪಡೆಯಬಹುದು.*ವಿವಿಧ ಬಗೆಯ ಪ್ರಾಕೃತಿಕ ಸಂಪನ್ಮೂಲಗಳ ವಿಶ್ಲೇಷಣೆ.

**V.ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 4X4=16**

34. ಬ್ರಿಟಿಷರ ವಿರುದ್ಧದ ಪುಟ್ಟಬಸಪ್ಪನ ಹೋರಾಟವು ಸದಾ ಸ್ಮರಣೀಯವಾದುದು. ಸಮರ್ಥಿಸಿ.

ಉತ್ತರ: *ಇದು ರೈತರ ಬಂಡಾಯವಾಗಿತ್ತು.*ಪುಟ್ಟಬಸಪ್ಪ ತಂಬಾಕಿನ ಮತ್ತು ಉಪ್ಪಿನ ಮೇಲಿನ ತೆರಿಗೆ ರದ್ಧ ಮಾಡುದನು. *ರೈತರು,ಭೂ ಹಿಡುವಳಿದಾರರು ಬೆಂಬಲ ನೀಡಿದರು.*ಸರಕಾರಿ ಕಛೇರಿಗಳನ್ನು ವಶಪಡಿಸಿಕೊಂಡರು.*ಜೈಲು ಮತ್ತು ಖಜಾನೆಗಳನ್ನು ಲೂಟಿ ಮಾಡಿದರು.*ಸೂಳ್ಯದ ಅಮಲ್ದಾರನ ಹತ್ಯೆ *ಬ್ರಿಟಿಷರು ಪುಟ್ಟಬಸಪ್ಪನನ್ನು ಸೆರೆ ಹಿಡಿದು ಗಲ್ಲಿಗೇರಿಸಿದರು.

ಅಥವಾ ಆರ್ಯ ಜನಾಂಗದ ಜನಪ್ರಿಯಗೊಳಿಸುವ ಹಿಟ್ಲರನ ಮಹಾತ್ವಾಂಕ್ಷೆಯು ಸಾಮೂಹಿಕ ಕಗ್ಗೊಲೆಗಳಿಗೆ ಕಾರಣವಾಯಿತು ಸಮರ್ಥಿಸಿ.

ಉತ್ತರ:* ಹಿಟ್ಲರ್ **ಚಾನ್ಸಲರ್ ಮತ್ತು ಫ್ಯೂರರ್** ಆದನು.* ಕಮ್ಯುನ್ಯಿಸ್ಟ್ ಮತ್ತು ಸೋಶಿಯಲಿಸ್ಟ್‌ರನ್ನು ದಮನ ಮಾಡಿದನು. * ಕಾರ್ಮಿಕ ಸಂಘ ಮತ್ತು ರಾಜಕೀಯ ಪಕ್ಷಗಳನ್ನು ರದ್ಧು ಮಾಡಿದನು.* **ನಾಜಿ ಪಕ್ಷ** ಕಟ್ಟಿದನು. ***ಆರ್ಯಜನಾಂಗ ಶ್ರೇಷ್ಠ**ವೆಂದು ಹೇಳಿದನು.*ಜಗತ್ತಿನ ಆಳ್ವಿಕೆಗೆ ಜರ್ಮನರು ಯೋಗ್ಯ ಎಂದು ಹೇಳಿದನು.*ಜರ್ಮನಿಯ ಸಮಸ್ಯೆಗೆ ಯಹೂದಿಯರು ಕಾರಣ ಎಂದು ಹೇಳಿದನು.*ಯಹೂದಿಯರು ಬದುಕಲು ಯೋಗ್ಯರಲ್ಲ ಎಂದು ಹೇಳಿದನು.* ಸುಮಾರು 60 ಲಕ್ಷ ಯಹೂದಿಯರನ್ನು **ಸಾಮೂಹಿಕ ಕಗ್ಗೊಲೆ** ಮಾಡಿಸಿದನು.***ಜನಾಂಗೀಯ ದ್ವೇಷ ಹರಡಲು ಗೋಬೆಲ್** ಎಂಬ ಮಂತ್ರಿಯನ್ನು ನೇಮಕ ಮಾಡಿದನು.

35. ಬ್ರಿಟಿಷರ ವಿರುದ್ದದ ಸಂತಾಲರ ಹೋರಾಟವನ್ನು ವಿವರಿಸಿ.

ಉತ್ತರ: * ಈ ಬುಡಕಟ್ಟು ಜನರನ್ನು ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಗುರುತಿಸಬಹುದು.* ಬ್ರಿಟಿಷರು ಜಾರಗೆ ತಂದ ಖಾಯಂ ಜಮೀನ್ದಾರಿ ಪದ್ದತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. * ಬುಡಕಟ್ಟು ಜನರ ಭೂಮಿಯು ಜಮೀನ್ದಾರರ ಕೈ ಸೇರಿತು. * ಬಂಗಾಳಿ ಜಮೀನ್ದಾರರು,ಲೇವಾದೇವಿಗಾರರು ಮತ್ತು ಕಂಪನಿ ಸರ್ಕಾರವು ಸಂತಾಲರ ನೇರ ಶೋಷಣಗೆ ಕಾರಣರಾದರು. * ಸಂತಾಲರು ರಹಸ್ಯ ಸಭೆ ನಡೆಸಿ ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿ ಮಾಡಲು ನಿರ್ಧರಿಸಿದರು. * ಬುಡಕಟ್ಟು ಜನರು ತಮ್ಮ ಶತ್ರುಗಳನ್ನು ಹತ್ಯ ಮಾಡಿದರು.* ಜಮೀನ್ದಾರರು ಮತ್ತು ಲೇವಾದೇವಿಗಾರರು ಪಲಾಯನ ಮಾಡಿದರು * ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು.

36. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕೆ ಹಲವಾರು ಉಪಕ್ರಮಗಳನ್ನು ಕೈಗೊಂಡಿವೆ. ಸ್ಪಷ್ಟೀಕರಿಸಿ.

ಉತ್ತರ:*2019ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿ. ***ಸ್ಮೈಲ್ ಯೋಜನೆ**ಯಡಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ ಕಲ್ಯಾಣಕ್ಕಾಗಿ **ಸಮಗ್ರ ಪುನರ್ವಸತಿ** ಎಂಬ ಉಪಯೋಜನೆ ಜಾರಿ. *ಲಿಂಗತ್ವ ಅಲ್ಪ ಸಂಖ್ಯಾತ ವ್ಯಕ್ತಿಗಳ **ರಾಷ್ಟ್ರೀಯ ಪರಿಷತ್ ರಚನೆ** ಮಾಡಿದೆ. **ನ್ಯಾಷನಲ್ ಪೋರ್ಟಲ್ ಟ್ರಾನ್ಸ್‌ಜೆಂಡರ್ಸ್** ರೂಪಿಸಲಾಗಿದೆ. * **ಗರೀಮಾಗೃಹ** ಎಂಬ ಹೆಸರಿನ ಆಶ್ರಯ ಮನೆಗಳನ್ನು ನಿರ್ಮಿಸಿಕೊಡಲಾಗಿದೆ

37. ಭೂಕಂಪದ ಕಾರಣ ಮತ್ತು ಪರಿಣಮಗಳೇನು?

ಉತ್ತರ:* ಭೂಮಿಯ ಅಂತರಾಳದಲ್ಲಿ **ಶಿಲಾಫಲಕಗಳ ಚಲನೆ** * **ನಗರೀಕರಣ**ದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗುವುದರಿಂದ * ಅರಣ್ಯನಾಶ*ಗಣಿಗಾರಿಕೆ * ಅಣೆಕಟ್ಟು ನಿರ್ಮಾಣ

**ಪರಿಣಾಮಗಳು**:*ನದಿಯ ಪಾತ್ರದಲ್ಲಿ ಬದಲಾವಣೆ *ಚಿಕ್ಕ ನದಿಗಳು ಹಾಳಾಗುತ್ತವೆ * ಸಾರಿಗೆ–ಸಂಪರ್ಕಕ್ಕೆ ಅಡ್ಡಿ *ಸಸ್ಯ ಸಂಕುಲ ನಾಶ *ಪ್ರಾಣಿ ಸಂಕುಲ ನಾಶ *ಜೀವಹಾನಿ *ಪ್ರಾಣಹಾನಿ*ಆಸ್ತಿ–ಪಾಸ್ತಿ ನಾಶ.*ಸುನಾಮಿ

**VI.38.ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5ನ್ನು ಗುರುತಿಸಿ. 5X1=5**

ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಕೋಸಿ ಅಣೆಕಟ್ಟು ಸಿ) ಕೈಗಾ ಡಿ) ವಿಶಾಖಪಟ್ಟಣಂ ಇ) ಮನ್ನಾರ್ ಖಾರಿ ಎಫ್) ಕೃಷ್ಣಾ ಮೇಲ್ದಂಡೆ ಯೋಜನೆ ಜಿ) ಗವಾಹಟಿ

